# ಜಾಕ್ ಮಾ ಸೆಕ್ಸಿ ಕಮೆಂಟ್

ಚೀನಾದ ದೈತ್ಯ ಬಹುರಾಷ್ಟ್ರೀಯ ಕಂಪನಿ, ಆಲಿಬಾಬಾ ಗ್ರೂಪ್‌ನ ಸಹಸ್ಥಾಪಕ, ಎಕ್ಸಿಕ್ಯೂಟಿವ್ ಚೇರ್‌ಮನ್ ಜಾಕ್ ಮಾ ಸುದ್ದಿಯಲ್ಲಿರುವ ಕೋಟ್ಯಧೀಶ. ಇದೀಗ ಲೈಂಗಿಕ ಕ್ರಿಯೆಗೆ ಸಂಬಂಧಿಸಿದ ಈತನ ಭಾಷಣವೊಂದು ಜಾಲತಾಣಗಳಲ್ಲಿ ಚರ್ಚೆ ಎಬ್ಬಿಸಿದೆ. 'ಟೆಕ್ಕಿಗರು ಲೈಂಗಿಕ ಕ್ರಿಯೆ ವಿಷಯದಲ್ಲಿ 669 ಸೂತ್ರ ಅನುಸರಿಸಬೇಕು' ಎನ್ನುವುದು ಜಾಕ್ ಮಾ ತನ್ನ ಉದ್ಯೋಗಿಗಳಿಗೆ ನೀಡಿದ ಸಲಹೆ.

ಚೀನಾದ 'ಅಲಿಬಾಬಾ ಗ್ರೂಪ್ ಹೋಲ್ಡಿಂಗ್ ಕಂಪನಿ ' ಸ್ಥಾಪನೆಯಾದದ್ದು 1999ರಲ್ಲಿ. ಮೊದಲು ಶುರುಮಾಡಿದ್ದು ಬಿಸಿನೆಸ್ ಇ–ಕಾಮರ್ಸ್. ಈಗದು ಜಗತ್ತಿನ ಅತಿದೊಡ್ಡ ಚಿಲ್ಲರೆ ಮಾರಾಟ ಕಂಪನಿ. ಜೊತೆಗೆ 'ಜಗತ್ತಿನ ಅತಿದೊಡ್ಡ ಇಂಟರ್‌ನೆಟ್; ಕೃತಕ ಬುದ್ಧಿಮತ್ತೆ ಮತ್ತು ಹೂಡಿಕೆ ಕಂಪನಿಗಳಲ್ಲಿ ಒಂದು.' ಕಂಪನಿಯ ಎಕ್ಸಿಕ್ಯೂಟಿವ್ ಚೇರ್‌ಮನ್ ಆಗಿರುವ ಜಾಕ್ ಮಾ, ಎರಡು ವರ್ಷದ ಹಿಂದೆ ವಿಶ್ವದ ಅತ್ಯಂತ ಪ್ರಭಾವಶಾಲಿ ವ್ಯಕ್ತಿಗಳ 'ಫಾರ್ಚೂನ್ ಪಟ್ಟಿ'ಯಲ್ಲಿ ಎರಡನೆ ಸ್ಥಾನ ಪಡೆದಾತ. ಜಗತ್ತಿನ ಐದನೇ ಅತಿದೊಡ್ಡ ಐಟಿ ಕಂಪನಿಯ ಈ ಮಾಲೀಕ 39.1 ಶತಕೋಟಿ ಡಾಲರ್ ನಿವ್ವಳ ಆಸ್ತಿ ಹೊಂದಿದ್ದು, ಚೀನಾದ 'ನಂಬರ್ ಒನ್' ಶ್ರೀಮಂತ. ಇಷ್ಟು ದೊಡ್ಡ ವ್ಯಕ್ತಿ, ಉದ್ಯೋಗಿಗಳ ಸೆಕ್ಸ್ ಜೀವನಕ್ಕೆ ಸಂಬಂಧಿಸಿ ಸಲಹೆ ಕೊಟ್ಟರೆ ಅದರ ಬಗ್ಗೆ ವ್ಯಾಪಕ ಚರ್ಚೆ ನಡೆಯದೆ ಇರುತ್ತದೆಯೆ?

ಪ್ರತಿವರ್ಷ ಮೇ 10ರಂದು ಅಲಿಬಾಬಾ ಕಂಪನಿಯಲ್ಲಿ 'ಅಲಿ ಡೇ' ನಡೆಯುತ್ತದೆ. ಆ ದಿನ ಕಂಪನಿಯ ಉದ್ಯೋಗಿಗಳ ಸಾಮೂಹಿಕ ವಿವಾಹ ಸಮಾರಂಭವನ್ನು ಕಂಪನಿಯೇ ಉಚಿತವಾಗಿ ಏರ್ಪಡಿಸುತ್ತದೆ. ಈ ಸಲ 102 ಜೋಡಿಗಳ ವಿವಾಹ ನಡೆಯಿತು. ಬಳಿಕ ಮಾತನಾಡಿದ ಜಾಕ್ ಮಾ ಹೇಳಿದ್ದಿಷ್ಟು: 'ಅಲಿಬಾಬಾ ದೊಡ್ಡ ಸಂಖ್ಯೆಯಲ್ಲಿ ದೇವ– ದೇವತೆಗಳನ್ನು ಸೃಷ್ಟಿಸಲು ಬಯಸುತ್ತದೆ. ದೇವ ಎಂದರೆ ಯಾರು? ಆತ ಕೆಲಸದಲ್ಲಿ 996 ಸ್ಫೂರ್ತಿಯನ್ನು ಮತ್ತು ಜೀವನದಲ್ಲಿ 669 ಗುರಿಯನ್ನು ಹೊಂದಿರಬೇಕು. ದೇವತೆ ಎಂದರೆ ಯಾರು? ಆಕೆ ಗಂಡಿನ 996 ಮತ್ತು 669 ಸಾಧನೆಯ ಗುರಿ ತಲುಪಲು ನೆರವಾಗಬೇಕು ಮತ್ತು ಅದನ್ನು ಸಾಧ್ಯವಾಗಿಸಬೇಕು. ವೈವಾಹಿಕ ಜೀವನ ಸಂತೋಷಮಯ ಆಗಿರಬೇಕು ಎಂದರೆ ಡಿಂಗ್‌ಡಾಂಗ್ ಅನ್ನು ಚೆನ್ನಾಗಿ ಬಳಸಬೇಕು.' (ಡಿಂಗ್‌ಡಾಂಗ್ ಎಂದರೆ ಚೀನಿ ಆಡುಮಾತಿನಲ್ಲಿ ಪುಲ್ಲಿಂಗ ಎಂದರ್ಥ!)

ಜಾಕ್ ಮಾ ಪ್ರಕಾರ, 'ಕೆಲಸದ ವಿಷಯದಲ್ಲಿ 996' ಎಂದರೆ, ಬೆಳಿಗ್ಗೆ 9ರಿಂದ ರಾತ್ರಿ 9ವರೆಗೆ ವಾರದ ಆರು ದಿನ ಕೆಲಸ ಮಾಡುವುದು! 'ದಿನಕ್ಕೆ ಎಂಟು ಗಂಟೆಗಳ ಕೆಲಸ ವಿಧಾನ ಸರಿಯಿಲ್ಲ. ನನ್ನ ಕಂಪನಿಯಲ್ಲಿ ಪ್ರತಿಯೊಬ್ಬರೂ ಬೆಳಿಗ್ಗೆ 9ರಿಂದ ರಾತ್ರಿ 9ರವರೆಗೆ 12 ಗಂಟೆ ಕೆಲಸ ಮಾಡಬೇಕು. ಹಾಗಿದ್ದರೆ ಮಾತ್ರ ಕಂಪನಿ ಸಾಧನೆ ಮಾಡಲು ಸಾಧ್ಯ' ಎನ್ನುವುದು ಆತನ ಹೇಳಿಕೆ. ಇದನ್ನು ಕೆಲವು ತಿಂಗಳ ಹಿಂದೆಯೇ ಆತ ಹೇಳಿದ್ದ. ಈಗ ಅದಕ್ಕೆ '669 ಸ್ಟೇಟ್‌ಮೆಂಟ್' ಜೊತೆಯಾಗಿದೆ.



'669 ಹೇಳಿಕೆ'ಯ ಅರ್ಥವೆಂದರೆ, ಪ್ರತಿದಿನವೂ ಒಂದು ಸಲದಂತೆ ವಾರದ ಆರು ದಿನವೂ ಲೈಂಗಿಕ ಕ್ರಿಯೆ ಮಾಡಬೇಕು. ಅದೂ ವಾರದಲ್ಲಿ ಒಟ್ಟು ಒಂಬತ್ತು ಗಂಟೆಯವರೆಗೆ..!'

ಈ ಹೇಳಿಕೆಗೆ ಸಾಮಾಜಿಕ ಜಾಲತಾಣಗಳಲ್ಲಿ ಒಂದೇ ಸಮನೆ ಟೀಕೆಗಳ ಮಳೆ ಸುರಿಯುತ್ತಿದೆ. 'ಕಚೇರಿಗಳಲ್ಲಿ ಬೆಳಿಗ್ಗೆ 9ರಿಂದ ರಾತ್ರಿ 9ರವರೆಗೆ ದುಡಿದಾತ ಮನೆಗೆ ಹೋಗಿ ಪ್ರತಿದಿನ ಲೈಂಗಿಕ ಕ್ರಿಯೆ ಮಾಡುವುದು ಹೇಗೆ ಸಾಧ್ಯ?' ಎಂದೊಬ್ಬ ನೌಕರ ಪ್ರಶ್ನಿಸಿದ್ದಾನೆ. ಕೆಲವರು 'ಇದು ಹೆಣ್ಣಿನ ಕುರಿತು ತಾರತಮ್ಯದ ಸ್ಪಷ್ಟ ಉದಾಹರಣೆ' ಎಂದಿದ್ದಾರೆ. 'ಅತ್ಯಂತ ಕೆಟ್ಟ ಜೋಕ್ ಮಾಡುವುದಲ್ಲದೆ ಅದನ್ನು ಪ್ರಚಾರ ಮಾಡುತ್ತಿದ್ದಾನೆ. ಈತ ಪುಟ್ಟಮಕ್ಕಳ ಬಗ್ಗೆ ಏನೆಂದು ಯೋಚಿಸುತ್ತಿದ್ದಾನೆ?' ಎಂದು ಕೆಲವರು ಕಿಡಿಕಾರಿದ್ದಾರೆ. 'ಕಂಪನಿಯ ಕೆಲಸದ ವಿಷಯದಲ್ಲಿ 996 ತತ್ವವನ್ನು ಬೋಧಿಸುವ ಟೆಕ್ ಕಂಪನಿಯ ಮಾಲೀಕರು ಹಾಗೆ ಅಧಿಕ ಗಂಟೆಗಳ ಕೆಲಸಕ್ಕೆ ಎಷ್ಟು ಓ.ಟಿ. ಕೊಡುತ್ತಾರೆ?' ಎನ್ನುವುದು ಇನ್ನು ಕೆಲವರ ತಕರಾರು.

ಟೆಕ್ಕಿಗಳ ಪ್ರಕಾರ, ಇದು ಚೀನಾದ ಕಂಪನಿಗಳಲ್ಲಿ ಹೆಣ್ಣುಮಕ್ಕಳ ಬಗ್ಗೆ ಇರುವ ನಿರ್ಲಕ್ಷ್ಯವನ್ನೂ ಎತ್ತಿ ತೋರಿಸಿದೆ. 'ಬಹುತೇಕ ಚೀನಾ ಐಟಿ ಕಂಪನಿಗಳಲ್ಲಿ ಹೆಣ್ಣುಮಕ್ಕಳಿಗೆ ಕಚೇರಿಯಲ್ಲಿ ಫ್ರಂಟ್ ಆಫೀಸಿನ ಅಲಂಕಾರಿಕ ಕೆಲಸ ಮಾತ್ರ ಸಿಗುತ್ತಿದೆ. ಕಂಪನಿಯ ಒಳಗಿನ ಬೌದ್ಧಿಕ ಕಸರತ್ತಿನಲ್ಲಿ ದೊಡ್ಡ ಪಾಲು ಗಂಡಸರದ್ದು. ಜಾಕ್ ಮಾ ಹೇಳಿಕೆ ಇಂತಹ ಲಿಂಗಬೇಧದ ಪರಿಸ್ಥಿತಿಯನ್ನು ಸಮರ್ಥಿಸುತ್ತಿದೆ' ಎಂದಿದ್ದಾರೆ ಹಲವರು. ಇದನ್ನು ಸಮರ್ಥಿಸುವಂತೆ ಚೀನಾದ ಇನ್ನೊಂದು ದೈತ್ಯ ಟೆಕ್ ಕಂಪನಿ ಟೆನ್ಸೆಂಟ್‌ನಲ್ಲಿ ನಡೆಯುವ ಉದ್ಯೋಗಿಗಳ ವಾರ್ಷಿಕ ಕ್ರೀಡಾಕೂಟದ ಬಗ್ಗೆಯೂ ಗಮನ ಸೆಳೆಯಲಾಗಿದೆ. ಟೆನ್ಸೆಂಟ್ ಕಂಪನಿಯ ಡಿನ್ನರ್ ಸಮಾರಂಭಗಳಲ್ಲಿ ಗಂಡು–ಹೆಣ್ಣು ಉದ್ಯೋಗಿಗಳ ನಡುವೆ ಒಂದು ಸ್ಪರ್ಧೆ ನಡೆಯುತ್ತದೆ. ಮಹಿಳಾ ಉದ್ಯೋಗಿ ತನ್ನ ತೊಡೆಗಳ ನಡುವೆ ನೀರು ತುಂಬಿದ ಬಾಟಲಿಯನ್ನು ಇಟ್ಟುಕೊಂಡು ನಿಲ್ಲಬೇಕು. ಪುರುಷ ಉದ್ಯೋಗಿ ಆ ನೀರಿನ ಬಾಟಲಿಯ ಮುಚ್ಚಳವನ್ನು ಬಾಯಿಯಲ್ಲಿ ಕಚ್ಚಿ ತೆಗೆಯಬೇಕು. ಇನ್ನು ಕೆಲವು ಕಂಪನಿಗಳಲ್ಲಿ ಪುರುಷ ಸಹೋದ್ಯೋಗಿಗಳನ್ನು ಕೆಲಸಕ್ಕೆ ಪ್ರೇರೇಪಿಸಲು ಮಹಿಳೆಯರ ನೇಮಕ ಮಾಡಿಕೊಳ್ಳುವುದೂ ಇದೆ.

ಈ ಗದ್ದಲದ ಬಗ್ಗೆ ಜಾಕ್ ಮಾ ತಲೆ ಕೆಡಿಸಿಕೊಂಡಿಲ್ಲ. ಈಗಾಗಲೇ ಆತ ಸಿಇಓ ಹುದ್ದೆಗೆ ರಾಜೀನಾಮೆ ನೀಡಿದ್ದಾನೆ. ಒಂದು ವರ್ಷದೊಳಗೆ ಎಕ್ಸಿಕ್ಯೂಟಿವ್ ಚೇರ್‌ಮನ್ ಹುದ್ದೆಯನ್ನೂ ಬಿಡುತ್ತಾನಂತೆ. 'ನಿವೃತ್ತಿಯ ಬಳಿಕ ಶಿಕ್ಷಣ ರಂಗದಲ್ಲಿ ಕೆಲಸ ಮಾಡಬೇಕು' ಎನ್ನುವುದು ಆತನ ಬಯಕೆ.

■ ಹನಿ

Printed and Published by B.A. Ravi on behalf of The Printers (Mysore) Private Ltd. Printed at M/s Rajhan's Enterprises, No.134, 4th Main Road, Industrial Town, Rajajinagar, Bangalore - 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 2588 0000, Fax: 25880618, Editorial:25880619, Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65